ಶ್ರೀ ಪಿ.ಸಿ. ಸಿದ್ದನಗೌಡರ್.—ಮಾನ್ಯ ಸಚಿವರು ತಪ್ಪು ಉತ್ತರದಲ್ಲಿ ಆ ಸ್ಥಳದಲ್ಲಿ ಕಲ್ಲು ಕೊರೆಯುತ್ತಿಲ್ಲವೆಂದು ಹೇಳಿದ್ದಾರೆ. ಸ್ಥಳ ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ, ಕಲ್ಲುಗಳನ್ನು ಕೊರೆಯುತ್ತಿದ್ದಾರೆಂದು. ಯಾವ ಅಧಿಕಾರಿಗಳು ಸ್ಥಳಕ್ಕೆ ಬಂದು ಕಲ್ಲು ಕೊರೆಯುವುದನ್ನು ನೋಡಿಲ್ಲ. ಅಲ್ಲಿ ಯಾವುದೇ ದೇವಾಲಯವಿರಲಿ, ಮಸೀದಿಯಿರಲಿ, ಸರ್ಕಾರದವರು ಕಲ್ಲು ಕೊರೆಯುವುದನ್ನು ನಿಲ್ಲಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಜೊತೆಗೆ ಕಲ್ಲು ಕೊರೆದರೆ ಅಲ್ಲಿರುವ ಬಸವಣ್ಣ ದೇವಾಲಯಕ್ಕೆ ತೊಂದರೆಯಾಗುವುದಿಲ್ಲವೆಂದು ಹೇಳಿದ್ದಾರೆ. ಇದನ್ನು ಯಾವ ಅಧಿಕಾರಿಗಳು ಸ್ಥಳಕ್ಕೆ ಬಂದು ನೋಡಿದ್ದಾರೆಂಬುದನ್ನು ಮಾನ್ಯ ಸಚಿವರು ಹೇಳಬೇಕು, ಅದೊಂದು ಧಾರ್ಮಿಕ ಸಂಸ್ಥೆ ಏನೋ ಒಂದು ಉದ್ದೇಶವಿರುತ್ತದೆ, ಅಲ್ಲಿಯ ಜನರಲ್ಲಿ ಈ ಕೆಲಸದಿಂದ ತಪ್ಪು ಕಲ್ಪನೆ ಬರಬಾರದು. ಆದ್ದರಿಂದ ಅಲ್ಲಿ ಕಲ್ಲು ಕೊರೆಯುವುದನ್ನು ಬಂದ್ ಮಾಡಬೇಕು.

ಶ್ರೀ ಸಿ. ರಮೇಶ್ ಜಿಗಜಿಣಗಿ.—ಮಾನ್ಯ ಸದಸ್ಯರು ಅಲ್ಲಿ ಯಾವುದೇ ಅಧಿಕಾರಿಗಳು ಸ್ಥಳಕ್ಕೆ ಬಂದು ನೋಡಿಲ್ಲವೆಂದು ಹೇಳುವುದು ಸರಿಯಲ್ಲ. ಎರಡು ತಿಂಗಳ ಹಿಂದೆ ಜನರ ಧಾರ್ಮಿಕ ಭಾವನೆಗಳಿಗೆ ತೊಂದರೆಯಾಗಿದೆಯೆಂದು ಅರ್ಜಿ ಕೊಟ್ಟ ಮೇಲೆ ನಾನು ಫೋನ್ ಮುಖಾಂತರ ವಿಚಾರಿಸಿದೆ. ಅದು ಫಾರೆಸ್ಟ್ ಜಮೀನು ಎಂದು ತಿಳಿದು ಬಂದು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಕೂಡಲೇ ಹೋಗಿ ಚರ್ಚೆ ಮಾಡಿ ಕೂಡಲೇ ಹೋಗಿ ರಿಪೋರ್ಟ್ ಕೊಡಬೇಕೆಂದು ಹೇಳಿದ್ದೇನೆ. ಅದರಂತೆ ಅವರು ಹೋಗಿ ನೋಡಿಕೊಂಡುಬಂದಿದ್ದಾರೆ. ದೇವಸ್ಥಾನಕ್ಕೆ ತೊಂದರೆ ಆಗುವುದಿಲ್ಲ ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಮಾಡಿದ್ದಾರೆ ಆದರೆ ಮಾನ್ಯ ಅಧ್ಯಕ್ಷರೇ, ಈ ದೇವಸ್ಥಾನಕ್ಕೆ ತೊಂದರೆಯಾಗುತ್ತದೆ ಎಂದು ಎಂದು ಗೊತ್ತಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಜನರ ಧಾರ್ಮಿಕ ಭಾವನೆಗೆ ಧಕ್ಕೆ ಬರಬಾರದು ಎಂಬ ಉದ್ದೇಶ ಸರ್ಕಾರದ್ದು ಇದೆ. ಧಾರ್ಮಿಕ ಸಂಸ್ಥೆಗೆ ತೊಂದರೆಯಾಗುತ್ತದೆ ಎಂದಿದ್ದಾರೆ ಆದಷ್ಟುಬೇಗ ಇದನ್ನು ಕ್ಯಾನ್ಸಲ್ ಮಾಡಿಸುತ್ತೇನೆ. ಬೇರೆ ಎಲ್ಲಿಯಾದರೂ ಸಹಿತ ಜನರ ಹಿತವನ್ನು ಕಾಪಾಡುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಸಿ. ಸಿದ್ದನಗೌಡರ್.—ಈ ಕಲ್ಲನ್ನು ರಪ್ತು ಮಾಡತಕ್ಕಂಥ ವಿಚಾರ ಇದೆ. ಮಾನ್ಯ ಸಚಿವರು ಸ್ಥಳಕ್ಕೆ ಭೇಟಿಕೊಟ್ಟು ಪರಿಶೀಲಿಸುತ್ತಾರೆಯೇ ಎಂದು ಕೇಳುತ್ತೇನೆ. ಮತ್ತು ಹೀಗೆ ಕಲ್ಲುಕೊರೆಯುವುದನ್ನು ಯಾವುದೇ ದೇವಸ್ಥಾನಕ್ಕೆ ಮುಂದೆ ಕೊಡುವುದಿಲ್ಲ ಎಂಬ ಭರವಸೆಯನ್ನು ಕೊಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಸಿ. ರಮೇಶ್ ಜಿಗಜಿಣಗಿ —ಈ ರೀತಿ ಜನರಲ್ ಆಗಿ ಹೇಳುವುದು ಕಷ್ಟವಾಗುತ್ತದೆ. ಏತಕ್ಕೆಂದರೆ ಈ ಕಲ್ಲು ಇರುವುದು ಗುಡ್ಡದ ಮೇಲೆ ಇಂತಹ ನಿರ್ದಿಷ್ಟ ಪ್ರಕರಣಗಳ ಬಗ್ಗೆ ಹೇಳಿದರೆ ಕೂಡಲೇ ನಿಲ್ಲಿಸುತ್ತೇನೆ. ಮತ್ತು ಸ್ಥಳ ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ನಾನು ಹೋಗುವುದಕ್ಕಿಂತಲೂ ಯಾರಾದರೂ ಹಿರಿಯ ಅಧಿಕಾರಿಗಳನ್ನು ಕಳಿಸುತ್ತೇನೆ.

ಮಂಡಲ ಪಂಚಾಯ್ತಿಗಳಿಗೆ ಕಲ್ಲಂ ಗಣಿಗಳ ಗುತ್ತಿಗೆ ವಹಿಸುವ ಬಗ್ಗೆ

೬೯೬. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಈ ಕೆಳಕಂಡ ಪ್ರಶ್ನೆಗಳಿಗೆ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ತಾಲ್ಲೂಕು ಮಟ್ಟದಲ್ಲಿರುವ ಸಣ್ಣಪುಟ್ಟ ಕಲ್ಲು ಗಣಿಗಳ ಗುತ್ತಿಗೆಯನ್ನು ಆಯಾ ಮಂಡಲ ಪಂಚಾಯ್ತಿಯ ಆಡಳಿತಕ್ಕೆ ವಹಿಸುವ ವಿಚಾರ ಸರ್ಕಾರಕ್ಕೆ ಇದೆಯೆ ?

ಆ) ಹಾಗಿದ್ದಲ್ಲಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು ಯಾವಾಗ ?

ಶ್ರೀ ಸಿ. ರಮೇಶ್ ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು).—

ಅ) ಇಲ್ಲ,

ಆ) ಉದ್ಭವಿಸುವುದಿಲ್ಲ.

ಶ್ರೀ ಜ್ಞಾನದೇವ್ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಬಹಳ ಸರಳ ಸುಂದರವಾದ ಉತ್ತರ ಕೊಟ್ಟಿದ್ದಾರೆ. ಆದರೆ ಅವರು ಒಂದು ಪತ್ರಿಕಾ ಹೇಳಿಕೆಯಲ್ಲಿ ನಾವು ಈ ಸಣ್ಣಪುಟ್ಟ ಕಲ್ಲುಗಳು ಏನಿವೆ, ಇವನ್ನು ಮಂಡಲಗಳಿಗೆ ವಹಿಸಿಕೊಡುತ್ತೇವೆ ಎಂದು ಹೇಳಿದ್ದಾರೆ. ಈ ರೀತಿಯಾಗಿ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಹೇಳಿಕೆಯು ತುಣುಗಳು ನನ್ನಲ್ಲಿ ಇಲ್ಲ. ಇದನ್ನು ಕನಿಷ್ಟಪಕ್ಷ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೋ ಹೇಗೆ ? ಇಲ್ಲವೆಂದು ಹೇಳುವುದು ಬಹಳ ಸುಲಭ, ಆದರೆ ಒಮ್ಮೆ ಪತ್ರಿಕೆಯಲ್ಲಿ ಪರಿಶೀಲಿಸುತ್ತಿದ್ದೇವೆ ಎಂದು ಹೇಳಿದಮೇಲೆ ವಿಧಾನಸಭೆಯ ಮಾತಿಗೆ ಅಂಟಿಕೊಂಡಿರಬೇಕೆಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಸಿ. ರಮೇಶ್ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ ನಾನಂ ಯಾವುದೇ ಶಬ್ದವನ್ನು ಹೇಳಿದರೂ ಅದಕ್ಕೆ ಅಂಟಿಕೊಳ್ಳದೇ ಹಿಂದಕ್ಕೆ ಹೋಗುವುದಿಲ್ಲ. ನಾನು ಕೊಟ್ಟಿರತಕ್ಕಂಥ ಪತ್ರಿಕಾ ಹೇಳಿಕೆಯನ್ನು ಮಾನ್ಯ ಸದಸ್ಯರು ಸರಿಯಾದ ರೀತಿಯಲ್ಲಿ ನೋಡಿಲ್ಲ ಎಂದು ನನ್ನ ಭಾವನೆ. ನಾನು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದು ಏನೆಂದರೆ ಮಂಡಲ ಪಂಚಾಯತ್‌ಗಳಿಗೆ ಸರ್ಕಾರದ ಪರವಾಗಿ ರಾಯಲ್ಟಿಯನ್ನು ವಸೂಲು ಮಾಡತಕ್ಕಂಥ ಅಧಿಕಾರ ಇಲ್ಲ. ಎನ್ನುವುದನ್ನು ಸ್ಪಷ್ಟವಾಗಿ ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ ಯಾರಿಗಾದರೂ ಮಂಡಲ ಪಂಚಾಯತಿ ವ್ಯಾಪ್ತಿಯಲ್ಲಿ ಬರತಕ್ಕಂಥ ಖನಿಜಗಳ ಬಗ್ಗೆ ಪರವಾನಗಿ ಬೇಕು ಎಂದು ಆ ಮಂಡಲ ಪಂಚಾಯತಿ ಅರ್ಜಿ ಸಲ್ಲಿಸಿದರೆ ಅದನ್ನು ಪ್ರಯಾರಿಟಿ ಬೇಸಿಸ್ ಮೇಲೆ ಕನ್ಸಿಡರ್ ಮಾಡುತ್ತೇನೆ ಎಂದು ಸ್ಪಷ್ಟವಾಗಿ ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದೇನೆ. ರಾಯಲ್ಟಿ ಕಲೆಕ್ಟ್ ಮಾಡತಕ್ಕ ಅಧಿಕಾರ ಮಂಡಲ್‌ಗಳಿಗೆ ಇಲ್ಲ ಆದರೆ ಅವರ ಕ್ಷೇತ್ರದಲ್ಲಿ ಯಾವ ಖನಿಜ ಸಿಗುತ್ತದೆ ಆದಕ್ಕೆ ರಾಯಲ್ಟಿ ಬೇಕು ಎಂದು ಅರ್ಜಿಸಲ್ಲಿಸಿದರೆ ನಾನು ಸಂಪೂರ್ಣವಾಗಿ ಅವರಿಗೆ ಕೊಡಿಸುತ್ತೇನೆ ಎಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಯಂ. ಭೂಪತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಕೊಟ್ಟಿಂಥ ಹೇಳಿಕೆ ಬಹಳ ಜನರ ಮನಸ್ಸಿನಲ್ಲಿ ಗೊಂದಲವನ್ನು ಸೃಷ್ಟಿ ಮಾಡಿದೆ ಎರಡು ಬಗೆಯ ಟ್ಯಾಕ್ಸ್‌ಗಳಿವೆ.ಒಂದು, ರಾಯಲ್ಟಿ ಇದನ್ನು ಸರ್ಕಾರವೇ ವಸೂಲು ಮಾಡುತ್ತದೆ. ಇದರಲ್ಲಿ ಗ್ರೆನೈಟ್, ಮ್ಯಾಂಗನೀಸ್ ಎಲ್ಲಾ ಬಂತು. ಇನ್ನೊಂದು ಕಡೆ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ ಮಿನರಲ್ ರಾಯಲ್ಟಿ ಟ್ಯಾಕ್ಸ್‌ನ್ನು ಮಂಡಲ್ ಪಂಚಾಯತಿಗಳು ವಸೂಲು ಮಾಡುತ್ತಾರೆ ಎಂದಿವೆ. ಈಗ ಅವರು ವಸೂಲು ಮಾಡುವುದಕ್ಕೆ ಹೋದರೆ ಗಣಿ ಮಾಲೀಕರು ನಿಮ್ಮ ಸ್ಟೇಟ್‌ಮೆಂಟ್‌ನ್ನು ಉಪಯೋಗಿಸಿಕೊಂಡು ನಾವು ಸರ್ಕಾರಕ್ಕೆ ರಾಯಲ್ಟಿಯನ್ನು ಕಟ್ಟುತ್ತಿದ್ದೇವೆ ಎಂದು ಹೇಳಬಹುದು ನನ್ನ ತಾಲ್ಲೂಕಿನ ಉದಾಹರಣೆಯನ್ನು ಹೇಳುವುದಾದರೆ ಎರಡು ಮಂಡಲ್ ಪಂಚಾಯತ್‌ಗಳಿಗೆ ವರ್ಷಕ್ಕೆ ಕೋಟಿಗಟ್ಟಲೆ ಆದಾಯ ಬರುತ್ತದೆ. ಈ ಪ್ರಾವಿಷನ್‌ಗೆ ತಿದ್ದುಪಡಿ ಮಾಡಿ ಸರ್ಕಾರವೇ ಇದನ್ನು ತೆಗೆದುಕೊಳ್ಳಬೇಕೆಂದು ಇದೆಯೆಂದು ಕೇಳಿದ್ದೇನೆ. ಇದು ನಿಜವೆ ? ಪಂಚಾಯತ್‌ಗಳಿಗೆ ಕೊಟ್ಟಿರುವ ಅಧಿಕಾರವನ್ನು ವಾಪಾಸ್ಸು ತೆಗೆದುಕೊಳ್ಳುವ ಯೋಚನೆಯನ್ನು ನಡೆಸಿದ್ದೀರಾ ?

ಶ್ರೀ ಸಿ. ರಮೇಶ್ ಜಿಗಜಿಣಗಿ.—ಈ ಮಿನರಲ್ ರಾಯಲ್ಟಿ ಟ್ಯಾಕ್ಸ್ ಬಗ್ಗೆ ಬಹಳ ಕಡೆಗಳಿಂದ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಹಾಗೆ ಬಂದಮೇಲೆ ಮಂಡಲ ಪಂಚಾಯತಿಗಳಿಗೆ ಈ ಮಿನರಲ್ಸ್ ರಾಯಲ್ಟಿ ಟ್ಯಾಕ್ಸ್ ಸಹಿತ ವಸೂಲು ಮಾಡುವುದಕ್ಕೆ ಕಾನೂನು ಕಾಯಿದೆಯ ಚೌಕಟ್ಟಿನಲ್ಲಿ ಯಾವ ಅಧಿಕಾರವೂ ಇಲ್ಲ ಇದನ್ನು ವಸೂಲು ಮಾಡಬೇಡಿ ಎಂದು ಮಂಡಲ್ ಪಂಚಾಯತಿಗಳಿಗೆ ನಾವು ಸೂಚನೆಗಳನ್ನು ಕಳಿಸಿದ್ದೇವೆ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು, ನಾವು ಶಹಬಾದ್, ವಾಡಿ, ಪಾಲಗತ್ತಿ ಮುಂತಾದ ಕಡೆಗಳಲ್ಲೆಲ್ಲಾ ತಿರುಗಿದ್ದೇವೆ. ಅಲ್ಲಿ ಮಂಡಲ ಪಂಚಾಯಿತಿಗಳಲ್ಲಿ ಬಿಳಿ ಕಲ್ಲು ಮತ್ತು ಕ್ವಾರೀಸ್ ಮೈನ್ಸ್ ಇವೆಲ್ಲಾ ಇವೆ. ಶ್ರೀ ಭೂಪತಿಯವರು ಹೇಳಿದ ಹಾಗೆ ಮಂಡಲ ಪಂಚಾಯಿತಿಯಲ್ಲಿ ಬರುವಂಥ ಸರ್ವೆ ನಂಬರ್‌ಗೆ ಅವರು ಡೆಡ್ ರೆಂಟ್ ಮತ್ತು ರಾಯಲ್ಟಿಯನ್ನು ತೆಗೆದುಕೊಳ್ಳುತ್ತಾರೆ. ಅಲ್ಲಿ ಮಿನರಲ್‌ನ್ನು ಎಕ್ಸ್‌ಪ್ಲಾಯಿಟ್ ಮಾಡಿ ತೆಗೆದುಕೊಂಡು ಹೋದಾಗ ಅವು ನಮ್ಮ ಭಾಗದಿಂದ ಹೋಗುತ್ತಿವೆ. ಅದಕ್ಕೆ ಕಾರ್ಪ್ ಟ್ಯಾಕ್ಸ್, ಲಾರಿ ಟ್ಯಾಕ್ಸ್‌ನ್ನು ಹಾಕಿವ ಪರವಾನಿಗೆಯನ್ನು ಮಂಡಲ ಪಂಚಾಯಿತಿಯವರಿಗೆ ಅಧಿಕಾರವನ್ನು ನಾವು ಕೊಟ್ಟಿದ್ದೇವೆ. ಅಲ್ಲಿ ಕಾರ್ಪ್ ಹೋಗಲಿ, ಲಾರಿ ಹೋಗಲಿ ಟ್ಯಾಕ್ಸ್ ಫಿಕ್ಸ್ ಮಾಡಿರುವ ರೀತ್ಯಾ ಹಾಕುತ್ತಾರೆ. ಆದ್ದರಿಂದ

ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟಿನವರು ನಮಗೆ ಪರವಾನಿಗೆಯನ್ನು ಕೊಡಬೇಕು. ಆ ರೀತಿ ಕೊಡದಿದ್ದರೆ It is our right, why should we ask the Government ಎಂದು ಹೇಳುತ್ತಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಯ ವ್ಯಾಪ್ತಿಗೆ ಇದು ಬರದಿದ್ದರೂ ಸಹಿತ ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಕೆ. ಬಿ ಶಾಣಪ್ಪ.—ಇದರಲ್ಲಿ ಸಜೆಷನ್ ಏನು ಇದೆ. ಅವರು ಏನೆಂದು ಅನ್ನುತ್ತಾರೆ ಎಂದರೆ ಮಂಡಲ ಪಂಚಾಯಿತಿಯಲ್ಲಿ ನಿಮ್ಮ ಗಾಡಿ ಮಿನರಲ್‌ನ್ನು ತೆಗೆದುಕೊಂಡು ಹೋಗುವುದಕ್ಕೆ ಬಿಡುವುದಿಲ್ಲ ಎಂದು ಹೇಳುತ್ತಾರೆ. ಅವರಿಗೆ ತಾವು ಅಧಿಕಾರವನ್ನು ಕೊಟ್ಟಿದ್ದೀರಿ, ಟ್ಯಾಕ್ಸ್ ಹಾಕ ಬಹುದು ಎಂದು. ಅದಕ್ಕೆ ತಾವು.....

ಅಧ್ಯಕ್ಷರು.—ಮಾನ್ಯ ಶಾಣಪ್ಪನವರೇ, ಮಾನ್ಯ ಮಂತ್ರಿಗಳು ಟ್ಯಾಕ್ಸ್‌ನ್ನು ಆಯಾಯ ಮಂಡಲ ಪಂಚಾಯಿತಿಗೆ ಕೊಡಬೇಕೋ ಬಿಡಬೇಕೋ ಎನ್ನುವುದರ ಬಗ್ಗೆ ಎಕ್ಸಾಮಿನ್ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಕೆ. ಬಿ ಶಾಣಪ್ಪ —ದಯಮಾಡಿ ಆದಷ್ಟು ಬೇಗ ಇದರ ಬಗ್ಗೆ ನೋಡಿ. ಮಂಡಲ ಪಂಚಾಯಿತಿಗಳು ಸೌಂಡ್ ಆಗಂತ್ತವೆ. ಬೇಸಿಕ್ ಸ್ಟ್ರಕ್ಚರ್ ಬಿಗಿಯಾಗುತ್ತದೆ ನೀವು ಡಿ-ಸೆಂಟ್ರಲೈಜೇಷನ್ ಪವರ್ಸ್ ಏನು ಮಾಡಿದ್ದೀರಿ, ಆದ್ದರಿಂದ ಸರ್ಕಾರದವರು ಅವರಿಗೆ ಟ್ಯಾಕ್ಸ್ ಕಲೆಕ್ಟ್ ಮಾಡಲಿಕ್ಕೆ ಪರವಾನಿಗೆಯನ್ನು ಕೊಡಿ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ನಾನು ಪರಿಶೀಲನೆ ಮಾಡುತ್ತೇನೆ ಎಂದು ಅಧ್ಯಕ್ಷರಿಗೆ ಹೇಳಿದ್ದೇನೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಅವರು ಉತ್ತರವನ್ನು ಕೊಡುವಾಗ ಅವರು ಹೇಳುತ್ತಿದ್ದರು, ಅಂಥ ಅಧಿಕಾರ ಪಂಚಾಯಿತಿಗಳಿಗೆ ಇಲ್ಲ ಎಂದು ಹೇಳಿದ್ದಾರೆ. You are misleading the whole House. There is a provision that Mandal Panchayat has got powers to collect Mineral Right Tax under the Zilla Parishad Act. You are saying that they do not have powers. They are collecting mineral right taxes. The Mine owners are not agreeing to give Mineral right taxes to Mandal Panchayat. ಇವರಿಗೆ ಅಧಿಕಾರ ಇಲ್ಲ ಎಂದು ಹೇಳಿಬಿಟ್ಟರೆ ಅವರು ನಾಳೆ ಮಂಡಲ ಪಂಚಾಯಿತಿಗಳನ್ನು ಹೇಗೆ ನಡೆಸಬೇಕು ? ಮಿನರಲ್ ರೈಟ್ ಟ್ಯಾಕ್ಸ್‌ನ್ನು ಗೌರ್ನಮೆಂಟ್‌ನವರು ಮಂಡಲ ಪಂಚಾಯಿತಿಗೆ ಕೊಟ್ಟಿರುವ ಪವರ್ಸ್‌ನ್ನು ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ are you bringing an amendment ? ಈ ಪ್ರೊಪೋಸಲ್ಸ್ ಇದೆ ಎಂದು ರೂಮರ್ಸ್ ಇದೆ Whether it is right or not. ನೀವು ಅಂಥ ಅಮೆಂಡ್‌ಮೆಂಟನ್ನು ಏನಾದರೂ ತರುತ್ತಿದ್ದೀರಾ ?

(ಗೊಂದಲ)

ಶ್ರೀ ರಮೇಶ್ ಸಿ. ಜಿಗಜಿಣಗಿ.—ಇಲ್ಲಿ ಮಿಸ್-ಲೀಡಿಂಗ್ ಏನೂ ಇಲ್ಲ. ಮುಂಚೆ ಮಿನರಲ್ಸ್ ಟ್ಯಾಕ್ಸ್‌ನ್ನು ಮಂಡಲಗಳು ತೆಗೆದುಕೊಳ್ಳುತ್ತಿದ್ದುದು ಸತ್ಯ. ಆಪೇಲೆ ಹೈಕೋರ್ಟ್‌ನಲ್ಲಿ ಒಂದು ಆರ್ಡರ್ ಮಾಡಿ ಇದನ್ನು ಮಂಡಲಗಳು ಕಲೆಕ್ಟ್ ಮಾಡುವುದು ಬೇಡ ಎಂದು ಈಗ ಆರ್ಡರ್ ಮಾಡಿದ್ದೇವೆ, ಅದರ ಸಲುವಾಗಿ ಅದನ್ನು ಸ್ಟಾಪ್ ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ಅವರು ಎಕ್ಸಾಮಿನ್ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ.....

(ಗೊಂದಲ)

ಅಧ್ಯಕ್ಷರು.—ನಿಮ್ಮ ಮೂವರ ಪೈಕಿ ಯಾರಾದರೂ ಒಬ್ಬರು ಪೂರಕವಾಗಿ.

ಶ್ರೀ ಯು. ಭೂಪತಿ.—ಹೈಕೋರ್ಟಿನಲ್ಲಿ ಸ್ಟೇ ಇದೆ ಎನ್ನುವಷ್ಟಕ್ಕಂಥ ವಿಚಾರ ನಮಗೆ ಗೊತ್ತಾಗಿದೆ. ಅದಕ್ಕೆ ನಾನು ಪ್ರಶ್ನೆಯನ್ನು ಎರಡೆರಡು ಸಾರಿ ಕೇಳಿದೆ. ಈಗ ಹೈಕೋರ್ಟ್‌ನಲ್ಲಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ, ಸರ್ಕಾರಕ್ಕೆ ರಾಯಲ್ಟಿಯನ್ನು ಕೊಡುತ್ತಿದ್ದಾರೆ, ಮೈನರಲ್ ರೈಟ್ಸ್ ಇನ್ನೊಂದು ಸಾರಿ ಕೊಡತಕ್ಕಂಥ ಪ್ರಶ್ನೆ ಇಲ್ಲ. ಮೈನರಲ್ ರೈಟ್ ಟ್ಯಾಕ್ಸ್‌ನ್ನು ಪಂಚಾಯಿತಿಗಳಿಗೆ ನಾವು ಕಾನೂನಿನಲ್ಲಿ ಒಪ್ಪಿಕೊಂಡಿರುವಾಗ, ಏನಾದರೂ ಇದರ ಬಗ್ಗೆ ಇರುವ ಸ್ಟೇ ವೇಕೇಟ್ ಮಾಡಿಸಿದ ನಂತರ ಅದನ್ನು ಪಂಚಾಯಿತಿಗಳಿಗೆ ಕೊಡುತ್ತೀರೋ ಅಥವಾ ಅದನ್ನು ಸರ್ಕಾರದವರು ಇಟ್ಟುಕೊಳ್ಳುತ್ತೀರೋ ? ದಯವಿಟ್ಟು ಹೇಳಿ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಈ ವಿಚಾರ ಕೋರ್ಟಿನಲ್ಲಿ ಇದೆ. ಅದು ಇತ್ಯರ್ಥ ಆಗುವರೆಗೆ ನಿರ್ದಿಷ್ಟವಾಗಿ ಏನನ್ನು ಹೇಳುವುದಕ್ಕೂ ಆಗುವುದಿಲ್ಲ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಮಂಡಲ ಪಂಚಾಯಿತಿಯವರು ಏನು ವಸೂಲು ಮಾಡುತ್ತಿದ್ದಾರೆ, ಅದನ್ನು ಯಾವ ಆಧಾರದ ಮೇಲೆ ಅವರಿಗೆ ತೆಗೆದುಕೊಳ್ಳಬೇಡಿ ಎಂದು ಹೇಳಿದ್ದೀರಿ ? ಯಾವ ಆಧಾರದ ಮೇಲೆ ನೀವು ವಸೂಲು ಮಾಡಬೇಡಿ ಎಂದು ಹೇಳಿದ್ದೀರಿ ಮತ್ತು ಭೂಪತಿಯವರು ಹೇಳಿದ ಹಾಗೆ ಕ್ವಾರೀಸ್ ಏನೇನು ಇದೆ ಅದರ ಕರ ವಸೂಲು ಮಾಡಲಿಕ್ಕೆ ಅಧಿಕಾರ ಇದೆ ಎನ್ನತಕ್ಕಂಥದ್ದು ಕೂಡಾ ಆ ಕಾನೂನಿನಲ್ಲಿಯೂ ಕೂಡಾ ಅವಕಾಶ ಇದೆ ಎಂದು ಅದನ್ನು ತೋರಿಸಿದ್ದೀರಿ. ಆದ್ದರಿಂದ ಈ ಎರಡಕ್ಕೂ ಸ್ಪಷ್ಟೀಕರಣ ಕೊಡಬೇಕು ಅಥವಾ ಮಂಡಲದವರು ತಾವೇ ಗುತ್ತಿಗೆಯನ್ನು ಹಿಡಿದರೆ ಅಥವಾ ತಾವೇ ಅದನ್ನು ಕೊಡುತ್ತೀರೋ ಏನು ಎಂಬುದರ ಬಗ್ಗೆ ಹೇಳಬೇಕು.

ಶ್ರೀ ರಮೇಶ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ ಮಂಡಲಗಳಿಗೆ ಕೊಡಬಾರದು ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯವಲ್ಲ. ಆದಕ್ಕೆ ನನ್ನ ವಿರೋಧವೂ ಇಲ್ಲ. ಸರ್ಕಾರದ ಒಂದು ಅಂಗ ಈ ಮಂಡಲ ಪಂಚಾಯಿತಿಗಳು. ಮಂಡಲಗಳಿಗೆ ಈ ರಾಯಲ್ಟಿ ಕೊಡಬೇಕೆಂದು ಯೋಚನೆ ಮಾಡಿದಾಗ ಹಿರಿಯ ಅಧಿಕಾರಿಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಒಂದು ಸಭೆ ಮಾಡಿದೆವು. ಆಗ ಎಲ್ಲರ ಅಭಿಪ್ರಾಯದಂತೆ ಮಂಡಲಗಳಿಗೆ ಕೊಡುವುದಕ್ಕೆ ಬರುವುದಿಲ್ಲವೆಂದು ತೀರ್ಮಾನ ಮಾಡಿದರು ಎರಡನೆಯದಾಗಿ ಮಂಡಲಗಳು ನಷ್ಟದಲ್ಲೇ ಬೇಕು ಎಂದು ಅರ್ಜಿ ಹಾಕಿಕೊಂಡರೆ ಆಗ ಪ್ರಿಯಾರಿಟಿ ಬೇಸಿಸ್‌ಮೇಲೆ ಕೊಡೋಣ ಎಂದು ಸಹ ತೀರ್ಮಾನಿಸಲಾಯಿತು. ಆ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ ಮಂಡಲಗಳಿಗೆ ಕೊಡುವುದಕ್ಕೆ ಕಾನೂನು ಅಂಕ ಏನಿದೆ ? ಈ ಮಂಡಲಗಳು ಆರ್ಥಿಕವಾಗಿ ಸೌಂಡ್ ಆಗಬಾರದೇ?

ಶ್ರೀ ರಮೇಶ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದ್ದೇನೆ. ಮಂಡಲಗಳಿಗೆ ಕೊಡಬಾರದು ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯವಲ್ಲ, ಇಲ್ಲಿ ಕಾನೂನಿನ ಅಡಚಣೆ ಇರುವುದರಿಂದ ಕೊಡುವುದಕ್ಕೆ ಬರುವುದಿಲ್ಲ. ಅದನ್ನು ಸರಿ ಮಾಡಿ ಕೊಡಲಿಕ್ಕೆ ಬಂದರೆ ಆಗ ಕೊಡೋಣ.

ಶ್ರೀ ಎಂ.ಎಸ್. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಆ ರೀತಿ ಹೇಳುವುದು ಸರಿಯಲ್ಲ. ಕಾನೂನಿನಲ್ಲಿ ಮೈನರಲ್ ರೈಟ್ಸ್ ಟ್ಯಾಕ್ಸ್‌ನ್ನು ಮಂಡಲಗಳು ವಸೂಲಿ ಮಾಡಬಹುದು ಎಂದು ಇದೆ. ಹೊಸದಾಗಿ ಕಾನೂನು ಮಾಡಬೇಕಾಗಿಲ್ಲ. ರಾಯಲ್ಟಿ ಬೇರೆ ಮೈನರಲ್ ರೈಟ್ ಟ್ಯಾಕ್ಸ್ ಬೇರೆ. ಮೈನರಲ್ ರೈಟ್ ಟ್ಯಾಕ್ಸ್‌ನ್ನು ವಸೂಲಿ ಮಾಡುವುದಕ್ಕೆ ಅವರಿಗೆ ರೈಟ್ಸ್ ಇದೆ. ಆದ್ದರಿಂದ ಅದಕ್ಕೆ ಪ್ರಯತ್ನ ಪಡಬೇಕು ಈಗ ಅವರು ಕೋರ್ಟಿಗೆ ಹೋಗಿದ್ದಾರೆ ಈ ಎರಡೂ ಟ್ಯಾಕ್ಸ್‌ನ್ನು ಅವರೇ ವಸೂಲಿ ಮಾಡಿಕೊಳ್ಳುವುದಕ್ಕೆ ಆಗುತ್ತದೆಯೋ ಏನೋ ನೋಡಬೇಕು, ಆ ರೀತಿ ಏನಾದರೂ ಕೋರ್ಟಿನಲ್ಲಿ ತೀರ್ಮಾನವಾದರೆ ತಾವು ಈ ಸದನಕ್ಕೆ ತಿಳಿಸಬೇಕು. ಇಲ್ಲಾ, ಇದಕ್ಕೆ ಏನಾದರೂ ಅಮೆಂಡ್‌ಮೆಂಟ್ ತಂದು ಮೈನರಲ್ ರೈಟ್ಸ್ ಟ್ಯಾಕ್ಸ್‌ನ್ನು ಮಂಡಲಗಳವರೇ ವಸೂಲಿ ಮಾಡಿಕೊಳ್ಳುವಂತೆ ಮಾಡುತ್ತೀರಾ ? ಇದು ಸ್ಪಷ್ಟವಾಗಿ ಹೇಳಬೇಕು ?

ಶ್ರೀ ರಮೇಶ ಸಿ. ಜಿಗಜಿಣಗಿ.--ಮಾನ್ಯ ಅಧ್ಯಕ್ಷರೇ ನಾನು ಈಗ ಸ್ಪಷ್ಟವಾಗಿ ಹೇಳುವುದಕ್ಕೆ ಕಷ್ಟವಾಗುತ್ತದೆ. ಕೋರ್ಟಿನಿಂದ ತೀರ್ಮಾನ ಬಂದ ಮೇಲೆ ಸ್ಪಷ್ಟವಾಗಿ ತೆಗೆದುಕೊಂಡ ತೀರ್ಮಾನವನ್ನು ಈ ಮನೆಗೆ ತಿಳಿಸುತ್ತೇನೆ. ಮಾನ್ಯ ಸದಸ್ಯರು ಮಿನರಲ್ ಗೈಟ್ ಟ್ಯಾಕ್ಸ್ ಬಗ್ಗೆ ಪ್ರಶ್ನೆ ಕೇಳಿರಲಿಲ್ಲ. ರಾಯಲಿಟಿ ಬಗ್ಗೆ ಪ್ರಸ್ತಾಪ ಮಾಡಿದ್ದರು ಆದಕ್ಕೆ ಆ ರೀತಿ ಉತ್ತರ ಕೊಟ್ಟೆ.

ಪ್ರಶ್ನೆ ಸಂಖ್ಯೆ : ೧೯೪ (೮೩೫) ಮಾನ್ಯ ಸದಸ್ಯರು ಗೈರು ಹಾಜರಿ.

ತರೀಕೆರೆ ತಾಲ್ಲೂಕಿನ ಗ್ರಾಮಗಳಿಗೆ ವಿದ್ಯುತ್ ಸರಬರಾಜು

೮೫೦. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).--ಮಾನ್ಯ ರಾಜ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಇನ್ನೂ ವಿದ್ಯುತ್ ಸರಬರಾಜು ಮಾಡ ಬೇಕಾಗಿದೆ.

ಆ) ಈ ತಾಲ್ಲೂಕಿನ ಬೇಚರ ಗ್ರಾಮಂಗಳಿಗೂ ವಿದ್ಯುತ್ ಸರಬರಾಜು ಮಾಡಲಾಗುವುದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).--

ಅ) ೧೯೭೧ರ ಜನಗಣತಿಯಂತೆ ವಿದ್ಯುದ್ದೀಕರಣವಾಗ ಬೇಕಾದ ಗ್ರಾಮಗಳಿಲ್ಲ. ೧೯೮೧ರ ಜನಗಣತಿಯಂತೆ ಇನ್ನೂ ೩ ಗ್ರಾಮಗಳು ವಿದ್ಯುದ್ದೀಕರಣವಾಗಬೇಕಾಗಿದೆ.

ಆ) ಬೇಚರ (ಜನವಸತಿ) ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡುವುದಿಲ್ಲ. ಕಾರಣ ವಿದ್ಯುತ್ ಬಳಸಿಕೊಳ್ಳಲು ಜನಗಳಿಲ್ಲ. ಜನ ವಾಸಿಸುವ ಗ್ರಾಮಗಳಿಗೆಲ್ಲಾ ವಿದ್ಯುತ್ ಸರಬರಾಜು ಮಾಡಲಾಗುತ್ತದೆ.

ಮಾನ್ಯ ಸದಸ್ಯರು ಒತ್ತಡ ಜಾಸ್ತಿ ತಂದರೆ ಬೇಚರ ಗ್ರಾಮಗಳಿಗೆ ಅಂದರೆ ಅಲ್ಲಿ ಮಂಟಪಗಳು ಏನಾದರೂ ಇದ್ದರೆ ಅಲ್ಲಿಗೆ ಒಂದು ಲೈಟ್ ಹಾಕಿಸಿ ಕೊಡುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ --ಮಾನ್ಯ ಅಧ್ಯಕ್ಷರೇ ೨೦ ಅಂಶದ ಕಾರ್ಯಕ್ರಮದ ಪಟ್ಟಿಯಲ್ಲಿ ಇನ್ನು ೧೪ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಕೊಡಬೇಕಾಗಿದೆ. ಆದರೆ ಇಲ್ಲಿ ಮಾನ್ಯ ಮಂತ್ರಿಗಳು ಮೂರು ಹಳ್ಳಿಗಳೆಂದು ಹೇಳಿದ್ದಾರೆ. ಇಲ್ಲಿ ಮಾನ್ಯ ಮಂತ್ರಿಗಳು ಕೊಟ್ಟಿರುವ ಗ್ರಾಮಗಳ ಹೆಸರಂಗಳು ಸಹ ತಪ್ಪು ಇವೆ. ಈ ವರದಿಯಿಂದಲೇ ಗೊತ್ತಾಗುತ್ತದೆ ಅಧಿಕಾರಿಗಳು ಎಷ್ಟು ಸುಲಭವಾಗಿ ಸ್ವಿಚ್ ಆಫ್ ಮಾಡುತ್ತಾರೆಂದು. ಇನ್ನು ೧೪ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜು ಆಗಬೇಕಾಗಿದೆ. ನಮ್ಮಲ್ಲಿ ೧೦-೧೫ ಬೇಚರಕಾ ಗ್ರಾಮಗಳು ಇವೆ. ಅಲ್ಲಿ ಸುಮಾರು ೩೦ ಕುಟುಂಬಗಳು ವಾಸ ಮಾಡುತ್ತಿದ್ದಾರೆ. ಈ ಹಳ್ಳಿಗಳಿಗೆ ಯಾವಾಗ, ಯಾವ ವರ್ಷ ವಿದ್ಯುಚ್ಛಕ್ತಿಯನ್ನು ಕಲ್ಪಿಸಿಕೊಡುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.--ಮಾನ್ಯ ಅಧ್ಯಕ್ಷರೇ ೧೯೮೧ನೇ ಇಸವಿಯ ಜನಗಣತಿಯ ಪ್ರಕಾರ ಗುರುತಿಸಲಾಗಿರುವ ಹಳ್ಳಿಗಳಿಗೆ ನಾವು ಸಿ.ಸಿ. ನಂಬರ್ ಸಹ ಕೊಟ್ಟಿದ್ದೇವೆ. ಆ ಹಳ್ಳಿಗಳೆಂದರೆ ಸಿದ್ದಕಾಡ ಹಳ್ಳಿ ಸಿ.ಸಿ. ನಂಬರು ೧೫೫ ಭರಮಂಪುರ ಸಿ.ಸಿ. ನಂಬರು ೨೪೬ ರಾಮಪುರ ಸಿ.ಸಿ. ನಂಬರು ೩೦.

ಅಧ್ಯಕ್ಷರು.-- ಮಾನ್ಯ ನೀಲಕಂಠಪ್ಪನವರು ಉಪಪ್ರಶ್ನೆಯನ್ನು ಕೇಳಿ.

ಶ್ರೀ ಬಿ ಆರ್. ನೀಲಕಂಠಪ್ಪ.--ಮಾನ್ಯ ಸಚಿವರು ಹೇಳಿದಂದರಲ್ಲಿ ನಮ್ಮ ತಾಲ್ಲೂಕಿನಲ್ಲಿ ಇಲ್ಲದ ಹೆಸರುಗಳು ಇವೆ. ಆ ಹಳ್ಳಿಗಳು ನಮ್ಮಲ್ಲಿ ಇಲ್ಲ. ಅಧಿಕಾರಿಗಳು ಹಳ್ಳಿಗಳ ಹೆಸರನ್ನು ಕೂಡ ತಪ್ಪಾಗಿ ಕೊಟ್ಟಿದ್ದಾರೆ. ಆ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡಿ. ನಮ್ಮ ತಾಲ್ಲೂಕಿನಲ್ಲಿ ೨೪೦ ಹಳ್ಳಿಗಳು ಇವೆ ಮಾನ್ಯ ಸಚಿವರು ಕೊಟ್ಟ ೧೪ ಹಳ್ಳಿಗಳ ಪಟ್ಟಿಯೂ ಕೂಡ ಸರಿಯಾದ ಮಾಹಿತಿಯನ್ನು ಕೊಡಲಿಲ್ಲ, ಯಾವುದೋ ಹಳ್ಳಿಗಳ ಹೆಸರನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.--ಮಾನ್ಯ ನೀಲಕಂಠಪ್ಪನವರೇ, ನಿಮಗೆ ಸಚಿವರ ಉತ್ತರ ಬೇಕೆ ? ಬೇಡವೆ ?